ಅಧ್ಯಕ್ಷರು :- ಬರೆದು ಕಳಿಸಿಕೊಡಿ.

ಶ್ರೀ ಕೆ.ಎಸ್.ಈಶ್ವರಪ್ಪ :- ಸರ್ಕಾರ ಇದರ ಬಗ್ಗೆ ಏನಾದರೂ ಹೇಳಿಕೆ ಕೊಡುತ್ತದೆಯೆ ? ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಇದ್ದಾಗಲೂ ನಾನು ಕೊಟ್ಟೆ. ಅವರು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ ಮತ್ತು ತನಿಖೆ ಮಾಡಿಸುತ್ತೇನೆ ಎಂದು ಕೂಡ ಹೇಳಿದ್ದರು. ಆದ್ದರಿಂದ ಸರ್ಕಾರ ಇದರ ಬಗ್ಗೆ ಏನಾದರೂ ಹೇಳಿಕೆ ಕೊಡುತ್ತದೆಯೇ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಧ್ಯಾಹ್ನದ ಮೇಲೆ . . . .

ಅಧ್ಯಕ್ಷರು :- ವಿದ್ಯಾ ಸಚಿವರು ಬರಲಿ. ಅವರು ಬಂದಮೇಲೆ ಅವರ ಕೈಯಲ್ಲಿ ಹೇಳಿಕೆ ಮಾಡಿಸುತ್ತೇನೆ, ಅವರಿಗೆ ಹೇಳೋಣ.

3. ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ನಾನು ಒಂದು ಪತ್ರವನ್ನು ತಮಗೆ ಕೊಟ್ಟಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಈ ವಿದ್ಯುಚ್ಛಕ್ತಿ ಅಭಾವದ ಬಗ್ಗೆ ಅನೇಕ ಬಾರಿ ಈ ಸದನದಲ್ಲಿ ಚರ್ಚೆ ಮಾಡಿದೆವು, ಸರ್ಕಾರಕ್ಕೆ ಪ್ರತಿಭಟನೆ ಮಾಡಿದೆವು. ಆದರೆ ಇವತ್ತಿನವರೆಗೂ ಸರ್ಕಾರ ಇದರ ಅಭಿವೃದ್ಧಿ ಬಗ್ಗೆ ತೀವ್ರವಾದಂಥ ಗಮನ ಕೊಟ್ಟಿಲ್ಲ. ಮೊನ್ನೆ ಸಹ ಮುಖ್ಯಮಂತ್ರಿಯವರ ಕಾರ್ಯಾಲಯದ ಮುಂದೆ ಚಳವಳಿಯನ್ನು ಕೂಡ ಮಾಡಿದೆವು. ಇದರ ಬಗ್ಗೆ ಏನೂ ಗಮನಹರಿಸಿಲ್ಲ. ಅತ್ಯಂತ ಮಹತ್ವವಾದ ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರ ಮತ್ತು ಸಭೆಯ ಗಮನಕ್ಕೆ ತರುತ್ತಿದ್ದೇನೆ. ನಿಜವಾಗಿ ಪ್ರತಿ ಹಳ್ಳಿಹಳ್ಳಿಗಳಲ್ಲಿ, ಕಾಲ್ಲೂಕುಗಳಲ್ಲಿ ವೋಲ್ಟೇಜ್ ಇಲ್ಲ, ಎಲ್ಲ ರೀತಿಯ ತೊಂದರೆ ಇದೆ, ನೀರಾವರಿ ಪಂಪುಸೆಟ್ಟುಗಳಿಗೆ ಬಹಳ ತೊಂದರೆ ಇದೆ. ಸರ್ಕಾರದವರು ನಮ್ಮನ್ನು ಕರೆಸಿ ಮಾತುಕತೆ ನಡೆಸುತ್ತೇವೆ ಎಂದು ಹೇಳಿದರು. ಇದುವರೆಗೂ ಸಭೆ ಆಗಿಲ್ಲ. ಈ ಸಭೆಯಲ್ಲಿ ಅನೇಕ ಬಾರಿ ಈ ಪ್ರಶ್ನೆಯನ್ನು ಎತ್ತಿದಾಗ ಸರ್ಕಾರ ಚಕಾರ ಕೂಡ ಎತ್ತಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಪರಿಣಾಮಕಾರಿಯಾದ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ಯಾವರೀತಿಯಲ್ಲಿ ಅನುಕೂಲ ಮಾಡುತ್ತಾರೆ ಎನ್ನುವುದನ್ನು ಹೇಳಬೇಕೆಂದು ತಮ್ಮ ಮೂಲಕ ಅವರಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ.

+ ಶ್ರೀ ಸಿ.ಬೈರೇಗೌಡ: (ವೇಮಗಲ್):-ಶ್ರೀ ವಾಟಾಳ್ ನಾಗರಾಜ್ ಮತ್ತು ನಾನು ಸಹ ತಮಗೆ ಪತ್ರದ ಮೂಲಕ ತಿಳಿಸಿದ್ದೇವೆ. ಕೋಲಾರ ಜಿಲ್ಲೆ ಬೆಂಗಳೂರು ಗ್ರಾಮಾಂತರ, ತುಮಕೂರು, ಮೂತ್ರವಲ್ಲದೆ ಇಡೀ ರಾಜ್ಯದಲ್ಲಿ ಇವತ್ತು ರೈತನ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಕಾರಣವೇನೆಂದರೆ, 440 ವೋಲ್ಟೇಜ್‌ಇರಬೇಕಾದದ್ದು ಅನೇಕ ಕಡೆ 150 ರಿಂದ 160 ಕೂಡ ಇರುವುದಿಲ್ಲ. ವೋಲ್ಟೇಜ್ ವ್ಯತ್ಯಾಸದಿಂದ ಪಂಪುಸೆಟ್ಟುಗಳು ಸುಟ್ಟುಹೋಗುತ್ತವೆ. ದಿವಸಕ್ಕೆ ನಾವಿರಾರು ಪಂಪುಸೆಟ್ಟುಗಳು ಸುಟ್ಟುಹೋಗುತ್ತಾ ಇವೆ. ಒಂದು ಪಂಪುಸೆಟ್ಟು ಸುಟ್ಟುಹೋದರೆ, ಕನಿಷ್ಠ ಮಾರು 5 ಸಾವಿರ ರೂಪಾಯಿಗಳು ರೈತರಿಗೆ ಖರ್ಚಾಗುತ್ತದೆ. ಸರ್ಕಾರದವರು 10 ಹೆಚ್.ಪಿ.ವರೆಗೆ ಉಚಿತವಾಗಿ ಕರೆಂಟ್ ಕೊಡುತ್ತೇವೆಂದು ಹೇಳಿದರು, ಇವರನ್ನುಯಾರು ಕೇಳಿದ್ದರು ? ಮಾತೆತ್ತಿದರೆ ಕರೆಂಟ್ ಉಚಿತವಾಗಿ ಕೊಡುತ್ತೇವೆಂದು ಹೇಳುತ್ತಾರೆ. ಈ ರೀತಿಯ ಉಚಿತ ಕರೆಂಟಿಗೆ ಎಷ್ಟು ಜನರು ಅರ್ಜಿಗಳನ್ನು ಕೊಟ್ಟಿದ್ದಾರೆಂಬುದನ್ನೂ ತೋರಿಸಲಿ. ಇವರು ಸರಿಯಾಗಿ ವಿದ್ಯುತ್ ಕೊಡದೇ ಇರತಕ್ಕ ಕಾರಣದಿಂದ, ಒಂದು ಪಂಪ್‌ಸೆಟ್ಟು ಸುಟ್ಟು ಹೋದರೆ ರೈತರಿಗೆ 5 ಸಾವಿರ ರೂಪಾಯಿ ನಷ್ಟವಾಗುತ್ತದೆ. ಈ ರೀತಿ 5 ಸಾವಿರ ರೂಪಾಯಿ ನಷ್ಟವಾದರೂ ಚಿಂತೆ ಇಲ್ಲ

ಒಬ್ಬೊಬ್ಬ ರೈತನ ಸಾವಿರಾರು , ಲಕ್ಷಾಂತರ ರೂಪಾಯಿಗಳ ಬೆಳ ನಷ್ಟವಾಗುತ್ತದೆ, ರಾಜ್ಯಾದ್ಯಂ
ನೂರಾರು ಕೋಟಿ ರೂಪಾಯಿಗಳ ಬೆಳೆ ನಷ್ಟವಾಗುತ್ತದೆ. ಇದನ್ನು ಪ್ರತಿಭಟನೆ ಮಾಡಿದ್ದಾರ
ಕೋಲಾರ ಜಿಲ್ಲೆಯಲ್ಲಿ ರಸ್ತೆ ತಡೆ ಚಳುವಳಿಯನ್ನು 12 ಗಂಟೆಗಳ ಕಾಲ ಮಾಡಿದರು. ನಾನ
ವಾಟಾಳ್ ನಾಗರಾಜ್‌ರವರು ಮತ್ತು ಇತರ ಸ್ನೇಹಿತರು ಸೇರಿ ಸಂಬಂಧಪಟ್ಟ ಮಂತ್ರಿಗಳ ಕಚೇರಿ
ಲಗ್ಗೆಹಾಕಿದ್ದೇವೆ, ಮಂತ್ರಿಗಳಕಛೇರಿಯಲ್ಲಿ ಧರಣಿ ಸತ್ಯಾಗ್ರಹ ಮಾಡಿದ್ದೇವೆ. ಆಗ ಅವರ
ವಿದ್ಯುತ್ ಮಂಡಳಿ ಅಧ್ಯಕ್ಷರನ್ನು ಕರೆಸಿ ಒಂದು ತೀರ್ಮಾನ ಮಾಡಿದರು. ಆಗ ನಾವೇನ
ಹೇಳಿದೆವು ಎಂದರೆ, ನೀವು ಕಾರ್ಖಾನೆಗಳಿಗೆ ಏನು ಪವರ್ ಕೊಡುತ್ತಿದ್ದೀರಿ, ಅಲ್ಲಿನ ಪವರ್ ಕಟ
ಜಾಸ್ತಿ ಮಾಡಿ, ಈಗ ಬೆಳೆದು ನಿಂತಿರತಕ್ಕ ಬೆಳೆಯನ್ನು ರಕ್ಷಣೆಮಾಡಿ, ಒಂದೆರಡು ತಿಂಗಳ
ವ್ಯವಸಾಯ ರಂಗಕ್ಕೆ ವಿದ್ಯುತ್ ಕೊಡಿ ಎಂದು ಹೇಳಿದೆವು. ಇಂಡಸ್ಟ್ರೀಸ್‌ಗೆ ಪವರ್ ಕಟ್ ಜಾಸ್
ಮಾಡಿ, ಕೇವಲ 2 ತಿಂಗಳು ಮಾತ್ರ ರೈತರಿಗೆ ಕರೆಂಟ್ ಕೊಡಿ ಎಂದು ಕೇಳಿದೆವು. ನಾವು ಈ ರೀ
ಎರಡು ತಿಂಗಳ ಕಾಲ ವ್ಯವಸಾಯ ರಂಗಕ್ಕೆ ವಿದ್ಯುತ್ ಹೆಚ್ಚಿಗೆ ಕೊಡಿ ಎಂದು ಹೇಳಿದಾಗ, ಅದೇ ರೀ
ಮಾಡುತ್ತೇವೆಂದರೂ, ನಾಳೆಯಿಂದಲೇ ಇದು ಜಾರಿಗೆ ಬರುತ್ತದೆಂದೂ ಮಾನ್ಯಮುಖ್ಯಮಂತ್ರಿಗಳು
ಹೇಳಿದರು ಹಾಗೂ ಅಂದಿನ ಸಭೆಯಲ್ಲಿದ್ದ ವಿದ್ಯುಚ್ಛಕ್ತಿ ಮಂಡಳಿ ಅಧ್ಯಕ್ಷರೂ ಕೂಡ ಹೇಳಿದರು
ಇದಾದ ಮೇಲೆ ನನ್ನ ಕ್ಷೇತ್ರದಲ್ಲಿ , ನನ್ನ ಜಿಲ್ಲೆಯಲ್ಲಿ ಅನೇಕ ಕಡೆ ಹೋಗಿ ಬಂದಿದ್ದೇನೆ. ಅದ
ರೀತಿ ಮಾನ್ಯ ವಾಟಾಳ್ ನಾಗರಾಜ್‌ರವರೂ ಕೂಡ ಅವರ ಕ್ಷೇತ್ರದಲ್ಲಿ ಮೈಸೂರು ಜಿಲ್ಲೆಯಲ್ಲಿ
ಹೋಗಿ ಬಂದಿದ್ದಾರೆ. ತಮಗೆ ಈ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನ
ಕೋಲಾರದಲ್ಲಿ ಒಂದು 220 ಕೆ.ವಿ.ಸ್ಟೇಷನ್ ಇದೆ, ಅಲ್ಲಿ ಇನ್‌ಕಮಿಂಗ್ ವೋಲ್ಟೇಜ್ ಎಷ್ಟು
ಇತ್ತು ಎನ್ನುವುದರ ಬಗ್ಗೆ ಮಾಹಿತಿಯನ್ನು ತಂದಿದ್ದೇನೆ. ಅಲ್ಲಿ 24 ಗಂಟೆಯೂ ಲಾಗ್ ಪುಸ್ತ
ಬರೆಯುತ್ತಾರೆ. ಪ್ರತಿ ಗಂಟೆಗೆ ವಿದ್ಯುತ್ ಎಷ್ಟು ಇತ್ತು, ಎಷ್ಟು ವಿದ್ಯುತ್ ಬರುತ್ತದೆ ಎನ್ನುವ
ಮಾಹಿತಿಯನ್ನು ಇಟ್ಟಿದ್ದಾರೆ. ಆ ಮಾಹಿತಿ ಪ್ರಕಾರ, ದಿನಾಂಕ 27-3-92 ರಂದು ಅಂದರೆ ಮೂರ
ದಿವಸದ ಹಿಂದೆ ರಾತ್ರಿ 12 ಗಂಟೆ ಸಮಯದಲ್ಲಿ 220 ಕೆ.ವಿ. ಇರಬೇಕಾಗಿರತಕ್ಕಂಥಾದ್ದು 17
ಕೆ.ವಿ.ಇದೆ, ಅದೇ 13 ಗಂಟೆಯಲ್ಲಿ 17 ಕೆ.ವಿ. ಇದೆ, 19 ಗಂಟೆಯಲ್ಲಿ 174 ಕೆ.ವಿ.ಇದೆ. ನಾವ
ಈ ವಿದ್ಯುಚ್ಛಕ್ತಿ ವಿಚಾರವಾಗಿ ಕೊಟ್ಟಂಥ ಸಲಹೆಗಳಾಗಲೀ, ರೈತರ ಕಷ್ಟಗಳಾಗಲೀ , ರೈತರಿ
ಆಗತಕ್ಕ ನಷ್ಟವಾಗಲೀ ಇದು ಯಾವುದೂ ಸರ್ಕಾರ ಗಮನಿಸಿಲ್ಲ. ಮತ್ತು ಇದೇ ವರ್ಷ ಈ ಪರಿಸ್ಥಿ
ಇದೆ ಎಂದಲ್ಲ. ಕಳೆದ 5-6 ವರ್ಷಗಳಿಂದಲೂ ಇದೇ ಪರಿಸ್ಥಿತಿ ಇದೆ. ನಾವು ಮುಖ್ಯ ಮಂತ್ರಿಗಳ
ಮನೆ ಮುಂದೆ ದರಣಿ ಸತ್ಯಾಗ್ರಹ ಮಾಡಿದ್ದೇವೆ, ಆಗ ಮುಖ್ಯಮಂತ್ರಿಗಳೂ ಸಹ ಇದನ್ನು
ಸರಿಪಡಿಸುತ್ತೇವೆಂದು ಹೇಳಿದರು. ಇದು ಯಾವುದೂ ಕಾರ್ಯಗತವಾಗಿಲ್ಲ. ರೈತರನ್ನು ಸರ್ವನಾಶ
ಮಾಡುವುದಕ್ಕೆ ವಿದ್ಯುತ್ ಮಂಡಳಿಯಿಂದ ನಡೆಯುತ್ತಿದೆ. ನಾವು ಎಲ್ಲಾ ವಿಧದಲ್ಲೂ, ತೀವ್ರವಾ
ಪ್ರತಿಭಟನೆಯನ್ನು ಸಲ್ಲಿಸದರೂ ಕೂಡ, ಸರ್ಕಾರ ಇಲ್ಲಿಯವರೆಗೂ ಯಾವ ಗಮನವನ್ನೂ
ಹರಿಸಿಲ್ಲ. ಇದು ರೈತರ ಜೀವನ್ಮರಣದ ಪ್ರಶ್ನೆಯಾಗಿದೆ. ಒಂದು ಗಂಟೆ ವಿದ್ಯುತ್ ಇಲ್ಲದಿದ್ದ
ರೈತರು ನೂರಾರು ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಾರೆ. ದಯಮಾಡಿ, ಸರ್ಕಾರಕ
ವಿನಂತಿ ಮಾಡಿಕೊಳ್ಳುತ್ತೇನೆ. ಈ ಪವರ್ ಕಟ್‌ನ್ನು ಇಂಡಸ್ಟ್ರೀಸ್‌ಗೆ ಜಾಸ್ತಿ ಮಾಡಿ, ರೈತರಿಗೆ ಮುಂದ
ಬರತಕ್ಕ ಈ ಎರಡು ತಿಂಗಳಲ್ಲಿ ವಿದ್ಯುತ್ ಹೆಚ್ಚುಮಾಡಿ ವೋಲ್ಟೇಜ್ ವ್ಯತ್ಯಾಸ ಕಡಿಮೆ, ಇದನ್ನು
ತಡೆಗಟ್ಟಿ. ನಾವು 15 ಗಂಟೆ ಕರಂಟ್ ಕೊಡಬೇಕೆಂಬ ಬೇಡಿಕೆ ಇಟ್ಟಿದ್ದೆವು. ಇಷ್ಟೆಲ್ಲಾ ಚಳವಳ
ಆದಮೇಲೆ, ಮಾನ್ಯ ಇಂಧನ ಖಾತೆ ಸಚಿವರಾದ ರಾಮಪ್ಪನವರ ಕಚೇರಿಯಲ್ಲಿ ಮಾತನಾಡಿದ

ಮೇಲೆ, 15 ಗಂಟೆಗೆ ಬದಲಾಗಿ 12 ಗಂಟೆಗೆ ಇಳಿಸಿದ್ದಾರೆ. ಈ 12 ಗಂಟೆಯಲ್ಲಿ 120 ಸಾವಿರ ಸಾರಿ ಕರಂಟ್ ಹೋಗುತ್ತದೆ. ಏನೂ ಸುಧಾರಣೆ ಆಗಿಲ್ಲ. ನಾವು ಗ್ರಾಮಾಂತರ ಪ್ರದೇಶಗಳಲ್ಲಿ, ನಮ್ಮ ನಮ್ಮ ಕ್ಷೇತ್ರಗಳಲ್ಲಿ ಓಡಾಡುವುದೇ ಕಷ್ಟವಾಗಿದೆ. ಯಾವ ಊರಿಗೆ ಹೋದರೂ ರೈತರೂ ನಮ್ಮ ಮೇಲೆ ಬೀಳುತ್ತಿದ್ದಾರೆ. ಇಂತಹ ಭೀಕರ ಪರಿಸ್ಥಿತಿ ಮತ್ತು ಸ್ಫೋಟಕವಾದ ಪರಿಸ್ಥಿತಿ ಇಡೀ ರಾಜ್ಯದಲ್ಲಿ ಇದೆ. ಇದನ್ನು ಸರಿಪಡಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ:(ಶಿಕಾರಿಪುರ):- ಸನ್ಮಾನ್ಯ ಅಧ್ಯಕ್ಷರೇ, ಇವತ್ತೇನು ವಿದ್ಯುತ್ ಶಾರ್ಟೇಜ್‌ನಿಂದ, ವೋಲ್ಟೇಜ್ ಡ್ರಾಪ್ ಆಗುವುದರಿಂದ ಏನು ಪ್ರಾಬ್ಲಂ ಆಗಿದೆ ಅದು ಪತ್ರಿಕೆಗಳಲ್ಲಿ ಬರುತ್ತಿದೆ. ಇಡೀ ರಾಜ್ಯದಲ್ಲಿ ಅನೇಕ ಕೆ.ಇ.ಬಿ. ಕಚೇರಿಗಳಿಗೆ ಬೀಗ ಹಾಕಿ, ಅಧಿಕಾರಿಗಳನ್ನು ಬಂಧನದಲ್ಲಿಟ್ಟು ಗೊಂದಲವಾಗಿದೆ. ನಾನು ರಾಜ್ಯದಲ್ಲಿ ಪ್ರವಾಸ ಮಾಡಿದಾಗ ಕಣ್ಣಿನಿಂದ ಕಂಡಂಥ ಸಂಗತಿ ಎಂದರೆ, ವಿಶೇಷವಾಗಿ ಗುಲಬರ್ಗಾ, ಬೆಳಗಾಂ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಒಂದೊಂದು ತಾಲೋಕಿನಲ್ಲಿ ಕೆಲವು ಕಡೆ 250-300 ಇರಿಗೇಷನ್ ಪಂಪ್‌ಸೆಟ್ಸು ಬರ್ನ್ ಆಗಿ ಮೋಟಾರ್ಸ್ ಸುಟ್ಟು ಹೋಗಿರುವಂತಹುದು ಸರ್ವೇಸಾಮಾನ್ಯವಾದ ಸಂಗತಿಯಾಗಿದೆ. ಅದರ ಬಗ್ಗೆ ಇಲ್ಲಿ ಚರ್ಚೆಯಾಗಿದೆ. ಇವತ್ತು ಸದನದ ಕಾರ್ಯಕಲಾಪ ನಡೆಯುತ್ತದೆ. ಕಳೆದ ಒಂದು ತಿಂಗಳಿಂದ ಈ ಸದನದ ಕಾರ್ಯಕಲಾಪದಲ್ಲಿ ಭಾಗವಹಿಸುವಂತಹ ಸಂದರ್ಭ ಬರಲಿಲ್ಲ. ಇವತ್ತು ವಿದ್ಯುತ್ ಕೊರತೆಯನ್ನು ತಪ್ಪಿಸುವಂತಹ ದೃಷ್ಟಿಯಿಂದ , ವೋಲ್ಟೇಜ್ ಡ್ರಾಪ್ ಆಗಿ, ಮೀಟರ್ಸ್ ಸುಟ್ಟು ಹೋಗಿ, ಇರಿಗೇಷನ್ ಪಂಪ್‌ಸೆಟ್ಸ್‌ಗೆ ಆಗಿರುವ ತೊಂದರೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ಮತ್ತು ಪರೀಕ್ಷೆಗಳು ನಡೆಯುತ್ತಿರುವ ಸಂದರ್ಭದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಓದುವುದಕ್ಕೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಸಂಬಂಧಪಟ್ಟ ವಿದ್ಯುಚ್ಛಕ್ತಿ ಇಲಾಖೆಯವರು ಗಮನ ಕೊಡುತ್ತಿಲ್ಲ. ಆದ್ದರಿಂದ ಇಲ್ಲಿ ಚರ್ಚೆ ಮಾಡುವುದರ ಮೂಲಕ ಎಲ್ಲಾ ಸತ್ಯ ಸಂಗತಿಗಳನ್ನು ಮತ್ತು ರೈತರ ಮೇಲೆ, ಸಾಮಾನ್ಯ ಜನರ ಮೇಲೆ ಆಗಿರುವ ಕೆಟ್ಟ ಪರಿಣಾಮಗಳನ್ನು ಸರಕಾರದ ಗಮನಕ್ಕೆ ತಂದಿರುತ್ತೇನೆ. ಇವತ್ತು ನಿರ್ದಿಷ್ಟವಾಗಿ ಒಂದು ಟ್ರಾನ್ಸ್‌ಫಾರ್ಮರ್‌ನಲ್ಲಿ ಐವತ್ತು ಕನೆಕ್ಷನ್ ಕೊಡುವ ಕಡೆ ನೂರೈವತ್ತು ಕನೆಕ್ಷನ್ಸ್ ಕೊಟ್ಟಿದ್ದಾರೆ. ಯಾವುದೋ ಒಬೀರಾಯನ ಕಾಲದ ಹಳೇ ವೈರ್ ಹಾಗೆಯೇ ಇದೆ, ಈ ರೀತಿ ಟ್ರಾನ್ಸ್‌ಮಿಷನ್ ಲಾಸ್ ಜಾಸ್ತಿ ಇದೆ, 19 ಪರ್ಸೆಂಟ್ ಎಂದು ಹೇಳುತ್ತಾರೆ, ಆದರೆ ಅದು 25 ರಿಂದ 30ಕ್ಕೆ ಬಂದಿದೆ. ಕಳ್ಳತನದಿಂದ ವಿದ್ಯುತ್ ಹೊಡೆದುಕೊಳ್ಳುವುದು ಪ್ರತಿದಿನ ಆಗುತ್ತಿದೆ. ಈ ಸಂದರ್ಭದಲ್ಲಿ ಸರಕಾರ ಕನಿಷ್ಠಪಕ್ಷ ಇವತ್ತಾದರೂ ಇಷ್ಟು ದಿವಸ ಸಮಯಕ್ಕೆ ಸರಿಯಾಗಿ ವಿದ್ಯುತ್ ಕೊಡುತ್ತೇವೆ, ವೋಲ್ಟೇಜ್ ಡ್ರಾಪ್ ಆಗದಹಾಗೆ ನೋಡಿಕೊಳ್ಳುತ್ತೇವೆ ಕೊಟ್ಟಂತ ಸಮಯದಲ್ಲಿ ವಿದ್ಯುತ್ ಕೊರತೆ ಇಲ್ಲದ ಹಾಗೆ ನೋಡಿಕೊಳ್ಳುತ್ತೇವೆ ಎಂದು ಹೇಳಬೇಕು. ಸರ್ಕಾರ ರೈತರ ನೆರವಿಗೆ ಬಾರದಿದ್ದರೆ ಅವರಿಗೆ ನೀರು ಸಿಗುವುದಿಲ್ಲ. ಪಂಪ್‌ಸೆಟ್ ಮೂಲಕ ಅಲ್ಪಸ್ವಲ್ಪ ಬೆಳೆ ಬೆಳೆದು ಬದುಕುತ್ತಿದ್ದರು. ಈಗಾಗಲೇ ಅದಕ್ಕೆ ಬೇಕಾದ ಇನ್‌ವೆಸ್ಟ್‌ಮೆಂಟ್ ಮಾಡಿಬಿಟ್ಟಿದ್ದಾರೆ. ಇನ್ನೇನು ಫಸಲು ಕೈಗೆ ಬರುವಂತಹ ಸಂದರ್ಭದಲ್ಲಿ ಅಂದರೆ ಮಾರ್ಚ್, ಏಪ್ರಿಲ್‌ನಲ್ಲಿ ಈ ರೀತಿ ತೊಂದರೆಯಾದರೆ ರೈತ ತಬ್ಬಲಿಯಾಗುವ ವಿಚಿತ್ರ ಪರಿಸ್ಥಿತಿ ಇಡೀ ರಾಜ್ಯದಲ್ಲಿದೆ. ಬೇಕಾದರೆ ಒಂದು ವರದಿ ತರಿಸಿಕೊಳ್ಳಿ. ಯಾವರೀತಿ ಪಂಪ್‌ಸೆಟ್ ಸುಟ್ಟು ಹೋಗುತ್ತಿದೆ, ಮೋಟಾರ್ಸ್, ಸ್ಟಾರ್ಟರ್ಸ್ ಸುಟ್ಟು ಹೋಗುತ್ತಿದೆ ಎಂಬುದರ ಬಗ್ಗೆ ವರದಿ ತರಿಸಿಕೊಳ್ಳಿ. ಒಂದು ಪಂಪ್‌ಸೆಟ್

ಸುಟ್ಟು ಹೋದರೆ ರೈತ 7-8 ಸಾವಿರ ರೂಪಾಯಿ ಲಾಸ್ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ಸರಿಪಡಿಸುವುದಕ್ಕೆ ಏನಾದರೂ ನಿರ್ದಿಷ್ಟ ಕಾರ್ಯಕ್ರಮ ಸರಕಾರದ ಕಣ್ಮುಂದೆ ಇದೆಯೇ ? ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿದ್ದಾರೆ ನಾವು ಇಲ್ಲಿಂದ ಹೋಗುವುದರೊಳಗೆ ಅವರು ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಸೋಮಪ್ಪ ಸುವರ್ಣ:(ಮೂಡಬಿದ್ರಿ):- ಮಾನ್ಯ ಅಧ್ಯಕ್ಷರೇ, ನಾನು ವಿದ್ಯಾ ಇಲಾಖೆಯ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ, ನಂತರ 334ನೇ ನಿಯಮದ ಮೇರೆಗೆ ನೋಟೀಸ್ ಕೊಟ್ಟಿದ್ದೆ. ದುರಾದೃಷ್ಟವಶಾತ್ ಈ ತನಕ ಉತ್ತರ ಬರಲಿಲ್ಲ. ನಮ್ಮ ಜಿಲ್ಲೆಯ ಮಣಿಪಾಲ್ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ನಡೆಸುತ್ತಿರತಕ್ಕಂಥ ಆರು ಕಾಲೇಜುಗಳಲ್ಲಿ ಹಿಂದುಳಿದವರ್ಗಗಳ ವಿದ್ಯಾರ್ಥಿಗಳಿಗೆ ಯಾವ ಶುಲ್ಕ ವಿನಾಯಿತಿ ಉಂಟು ಅದು ಇನ್ನೂ ಬಂದಿಲ್ಲ.

ಅಧ್ಯಕ್ಷರು :-ನಾನು ವಿದ್ಯುಚ್ಛಕ್ತಿ ವಿಚಾರ ಹೇಳುತ್ತಾರೆ ಎಂದು ಕೊಂಡಿದ್ದೆ. ನಾನು ಅದನ್ನು ನೋಡುತ್ತೇನೆ, ನಾಳೆ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಿಲುವಳಿ ಸೂಚನೆ ಅನುಮತಿ ಕೋರಿಕೆ

ಶ್ರೀ ಬಿ.ಹೆಚ್.ಬನ್ನಿಕೋಡ್ :(ಹಿರೇಕೆರೂರ್):- ರಾಜ್ಯದಲ್ಲಿ ವಿದ್ಯುತ್‌ಚ್ಛಕ್ತಿ ಅಭಾವದ ಬಗ್ಗೆ ನಾವು ಒಂದು ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದೆವು.

ಅಧ್ಯಕ್ಷರು :- ಸೂಚನೆ ಬಂದಿದೆ, ನಿಲುವಳಿ ಸೂಚನೆ ಬಂದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ತಾವು ಹಿಂದೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದಿರಿ.

ಅಧ್ಯಕ್ಷರು:- ನಾನು ಯಾವಾಗ ಅವಕಾಶ ಕೊಡುತ್ತೇನೆಂದು ಹೇಳಿದ್ದೆ.

ಶ್ರೀ ಬಿ.ಹೆಚ್.ಬನ್ನಿಕೋಡ್ :- ಹೋದಸಾರಿ ಹೇಳಿದ್ದೀರಿ.

ಅಧ್ಯಕ್ಷರು:- ಹೋದ ಸಾರಿ ಹೇಳಿದ್ದೆ, ಹೋದ ಅಧಿವೇಶನದಲ್ಲಿ ಹೇಳಿದ್ದೆ ಎಂದು ಕಾಣುತ್ತದೆ.

ಶ್ರೀ ಬಿ.ಹೆಚ್.ಬನ್ನಿಕೋಡ್:- ಹೋದವಾರ ಹೇಳಿದ್ದಿರಿ. ಅದಕ್ಕೆ ರಾಜ್ಯದ ವಿದ್ಯುಚ್ಛಕ್ತಿ ತೊಂದರೆ ಬಗ್ಗೆ ಹೇಳುವುದಾದರೆ, ಶಿವಮೊಗ್ಗ ಜಿಲ್ಲೆ, ಧಾರವಾಡ ಜಿಲ್ಲೆಯ ನನ್ನ ಕ್ಷೇತ್ರಕ್ಕೆ ಎರಡು ಕಿಲೋಮೀಟರ್ ದೂರದಲ್ಲಿದೆ. ಶಿವಮೊಗ್ಗ ಜಿಲ್ಲೆಯಲ್ಲಿ 24 ಘಂಟೆಗಳ ಕಾಲ ವಿದ್ಯುತ್ ಇರುತ್ತದೆ, ರೈತರು ನೀರನ್ನು ಹಾಯಿಸುತ್ತಿರುತ್ತಾರೆ. ಆದರೆ ಪಕ್ಕದಲ್ಲೇ ಇರುವ ನಮ್ಮ ಹಿರೇಕೆರೂರು ತಾಲ್ಲೂಕಿನಲ್ಲಿ ವಿದ್ಯುತ್ ಮೇಲಿಂದ ಮೇಲೆ ಹೋಗುತ್ತಿರುತ್ತದೆ. ರೈತರುಗಳ ನೂರಾರು ಪಂಪ್‌ಸೆಟ್‌ಗಳು ಸುಟ್ಟು ಹೋಗಿದೆ. ಇದೊಂದು ಸಂಗತಿ ಹೇಳಿದರೆ ತಾವು ನಂಬಲಿಕ್ಕಿಲ್ಲ. ನಾನು ಒಂದು ಗ್ರಾಮಕ್ಕೆ ಹೋಗಿದ್ದೆ. ಅವರು ಒಂದು ಅರ್ಜಿ ಕೊಟ್ಟು ಓದಲಿಕ್ಕೆ ಹೇಳಿದರೆ, ಅವರು ಬೇಕೆಂದೇ ಹೇಳಿದರೋ ಏನೋ ಗೊತ್ತಿಲ್ಲ. ಅದನ್ನು ಓದುವುದಕ್ಕೆ ಸಾಧ್ಯವಾಗಲಿಲ್ಲ. ಕಾರಣ ಸಿಂಗಲ್ ಫ್ಯೂಸ್ ಇತ್ತು, ಆಗ ಚಿಮಣಿ ತರಿಸಿಕೊಂಡು ಚಿಮಣಿ ಮೂಲಕವೇ ಓದಬೇಕಾಯಿತು. ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆ ಇದೆ, ಅವರು ಯಾವರೀತಿ ಅಭ್ಯಾಸ ಮಾಡಿ ಪರೀಕ್ಷೆ ತೆಗೆದುಕೊಳ್ಳಬೇಕು. ರೈತರ ಪಂಪ್‌ಸೆಟ್ ಸುಟ್ಟರೆ ಎರಡು ಎರಡೂವರೆ ಸಾವಿರ ರೂಪಾಯಿ ಹಾಳಾಗುತ್ತದೆ. ನೂರಾರು ಪಂಪ್‌ಸೆಟ್‌ಗಳು ಸುಟ್ಟರೆ ಕೋಟ್ಯಾಂತರ ರೂಪಾಯಿನ ಬೆಳೆ ಹಾಳಾಗುತ್ತದೆ. ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ನಮಗೆ ಶರಾವತಿಯಿಂದ ಹೊಸಪೇಟೆ, ಹೊಸಪೇಟೆಯಿಂದ ದಾವಣಗೆರೆ, ದಾವಣಗೆರೆಯಿಂದ ಹಿರೇಕೆರೂರಿಗೆ ಈ

ವರ್ಷವೇ ವಿದ್ಯುತ್ ಬರುತ್ತಿದೆ. ಇದನ್ನು ತಪ್ಪಿಸಿ ಶರಾವತಿಯಿಂದ ನೇರವಾಗಿ ಶಿವಮೊಗ್ಗ ಜಿಲ್ಲೆಗೆ ಬರತಕ್ಕಂಥ ಮೇನ್ ಲೈನ್‌ನಿಂದ ಹಿರೇಕೆರೂರಿಗೆ ಕನೆಕ್ಷನ್ ಕೊಟ್ಟರೆ ಸುಧಾರಣೆಯಾಗುತ್ತದೆ, ತಮ್ಮ ತಾಲೋಕಿನ ಜನರ ಜೊತೆ ನಮ್ಮ ತಾಲೋಕಿನ ರೈತ ಜನರೂ ನೆಮ್ಮದಿಯಿಂದ ಇರಬಹುದೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆಯನ್ನು ಅವರು ಯಾವಾಗ ಕಳುಹಿಸಿದ್ದಾರೋ ಗೊತ್ತಿಲ್ಲ. ಅದು ತಮ್ಮ ಕಾರ್ಯಾಲಯಕ್ಕೆ ಏನಾದರೂ ಬಂದಿದ್ದರೆ ಇಷ್ಟು ಹೊತ್ತಿಗೆ ಅದರ ಪ್ರತಿ ನಮಗೆ ಬರಬೇಕಾಗಿತ್ತು. ನನಗೆ ಗೊತ್ತಿರುವ ಹಾಗೆ, ಅಂತಹದೇನೂ ನಮ್ಮ ಗಮನಕ್ಕೆ ಬಂದಿಲ್ಲ.

ಅಧ್ಯಕ್ಷರು:- ನಿಲುವಳಿ ಸೂಚನೆ ಅಲ್ಲ, ಬರೀ ಸೂಚನೆ.

(12.50 ಪಿ.ಎಂ)

ಶ್ರೀ ಎಸ್.ಬಂಗಾರಪ್ಪ :- ಎರಡನೇ ವಿಷಯ ಏನೆಂದರೆ, ಈ ಒಂದು ಸಂದರ್ಭದಲ್ಲಿ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಮುಂದಿನ ಮಳೆಗಾಲ ಪ್ರಾರಂಭವಾಗುವವರೆಗೂ ಪ್ರತಿ ವರ್ಷವೂ ಕೂಡ ತೊಂದರೆ ಬಂದೆ ಬರುತ್ತದೆ. ಅದಕ್ಕೆ ಕಾರಣ ಕೂಡ ಇದೆ. ನಮ್ಮ ಪಾಲಿಸಿಗಳಿಂದ ಕೆಲವು ಸಾರಿ ತೊಂದರೆ ಆಗಿರಬಹುದು. ಕೆ.ಇ.ಬಿ. ಮುಖಾಂತರ ನಾವು ಏನು ಮೈನ್‌ಟೆನೆನ್ಸ್ ಮತ್ತು ಡಿಸ್ಟ್ರಿಬ್ಯೂಶನ್ ಆಫ್ ದಿ ಪವರ್ ಇಟ್ಟುಕೊಂಡಿದ್ದೇವೆ ಅದು ಇರಬಹುದು. ಅನಂತರ ನಾವು ಅವರು ಹೇಳಿದಹಾಗೆ ಆ ಲೈನ್‌ನಲ್ಲಿ ಹೆಚ್ಚು ಪಂಪ್‌ಸೆಟ್‌ಗಳಿಗೆ ಕನೆಕ್ಷನ್ ಕೊಡತಕ್ಕಂಥಾದ್ದು ಏನಿದೆ ಅದು ಓವರ್ ಲೋಡ್ ಆಗುತ್ತದೆ ಅಥವಾ ಆ ಲೈನ್‌ನಲ್ಲಿ ಆ ಲೋಡ್ ಜಾಸ್ತಿ ಯಾಗುತ್ತದೆ. ಅದು ಇರಬಹುದು. ಮತ್ತು ಸೋರಿಕೆಯಾಗತಕ್ಕಂಥ ವಿಷಯ ಕೂಡ ಇರಬಹುದು. ಇತ್ಯಾದಿ ವಿಚಾರಗಳನ್ನು ಸಹಜವಾಗಿ ನಾವು ಈ ಸಂದರ್ಭದಲ್ಲಿ ಚರ್ಚೆ ಮಾಡಿ ಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರ ಕಳಕಳಿ ಇಂದಿನದು ಅಲ್ಲ. ಕಳೆದ ವರ್ಷ ಕೂಡ ಇದೇ ರೀತಿ ಬಂದಿತ್ತು. ಮಾನ್ಯ ಬೈರೇಗೌಡರಿಗೆ ಗೊತ್ತಿದೆ. ಈ ಬಗ್ಗೆ ಒಂದು ನಿಯೋಗ ಕೂಡ ಬಂದಿತ್ತು. ಅದರಲ್ಲಿ ಆ ಮನೆಯ ಮತ್ತು ಈ ಮನೆಯ ಸದಸ್ಯರುಗಳು ಮತ್ತು ಮಾನ್ಯ ಪಿಳ್ಳಪ್ಪನವರು ಉಳಿದಿರತಕ್ಕಂಥ ಎಲ್ಲಾಮಾನ್ಯ ಸದಸ್ಯರುಗಳು ಬಂದಂತಹ ಸಂದರ್ಭದಲ್ಲಿ ಕೆ.ಇ.ಬಿ. ಛೇರ್ಮನ್‌ರವರನ್ನು ಮತ್ತೊಬ್ಬರನ್ನು ಕರೆಸಿ ನಾನೆ ಖುದ್ದಾಗಿ ಮಾತನಾಡಿದ್ದೇನೆ. ಅದು ಸರಿಯಾಗಿದೆ ಎನ್ನತಕ್ಕಂಥ ಅಭಿಪ್ರಾಯ ವ್ಯಕ್ತಪಡಿಸಿದರು. ಕೊನೆಯದಾಗಿ ಅವರುಈ ಸದನದಲ್ಲಿ ಕೂಡ ಹೇಳಿದರು. ಈ ಸಾರಿ ನಾನು ಅದನ್ನು ನೋಡುವುದಕ್ಕೆ ಕಾಲದ ಅಭಾವದಿಂದ ಸಾಧ್ಯವಾಗಲಿಲ್ಲ. ತಾವು ಹೇಳಿದ ಹಾಗೆ ಮಾನ್ಯ ಸಚಿವರಾದ ಶ್ರೀಮಾನ್ ರಾಮಪ್ಪನವರು ಇವರನ್ನು ಕರೆಯಿಸಿ ಮಾತನಾಡಿದ್ದಾರೆ ಎನ್ನತಕ್ಕಂಥ ವಿಚಾರ ಇದು ಗೊತ್ತಾಯಿತು. ಇದರಲ್ಲಿ ನೀವು ಹೇಳಿದಹಾಗೆ ಸ್ವಲ್ಪ better we have a second look on it ಎಂದು ನನಗೆ ಕೂಡ ಅನಿಸುತ್ತಿದೆ. purely on merits I am speaking . ಈಗ ಏನಾಗುತ್ತದೆ ಎಂದರೆ,ನಮ್ಮ ಹೆಲ್ತ್ ಯೂಸರ್ಸ್ ಏನಿದೆ, ನಾವು ಕೊಡತಕ್ಕಂಥ ವಿದ್ಯುಚ್ಛಕ್ತಿ ಪ್ರಮಾಣದಲ್ಲಿ ನಾವು ಕಟ್ ಕೂಡ ಮಾಡಬೇಕಾಗುತ್ತದೆ. ಅದಷ್ಟು ಈ ಅಗ್ರಿಕಲ್ಚರ್ ಸೆಕ್ಟಾರ್‌ನಲ್ಲಿ ಪಂಪ್‌ಸೆಟ್ಸ್ ಇತ್ಯಾದಿಗಳಿಗೆ ನಾವು ಉಪಯೋಗ ಮಾಡತಕ್ಕಂಥಾದ್ದು. ಈ ಟೈಮ್‌ನಲ್ಲಿ ಕುಡಿಯುವ ನೀರನ್ನು ಕೂಡ ನಾವು ಗಮನದಲ್ಲಿಟ್ಟು ಇಟ್ಟುಕೊಳ್ಳಬೇಕಾಗುತ್ತದೆ. ಅದಕ್ಕೆ ವಿದ್ಯುಚ್ಛಕ್ತಿ ಕಟ್ ಆದರೆ, ಬರೀ ಪಂಪ್‌ಸೆಟ್ ಅಷ್ಟೇ ಅಲ್ಲ. ಕುಡಿಯುವ ನೀರನ್ನು ಅವಲಂಬಿಸಿರುವ ನೂರಾರು/ ಗ್ರಾಮಗಳು ಇವೆ. ಅಲ್ಲೂ ಕೂಡ ತೊಂದರೆಯಾಗುತ್ತದೆ.

ಆಮೇಲೆಹಿಟ್ಟಿನ ಗಿರಣಿಗಳು ಕೂಡ ಸೇರಿಕೊಂಡಂತೆ ಇದೆ. ಈಗ ನಾವು ಏನು ವಿದ್ಯುಚ್ಛಕ್ತಿ ಕೊಡುತ್ತೇವೆ ಅದರ ಬಗ್ಗೆ ಈಗಾಗಲೇ ಕಂಪ್ಲೇಂಟ್ಸ್ ಕೂಡ ಬಂದಿವೆ. ನಿನ್ನೆಯಲ್ಲ ಮೊನ್ನೆ ನಾನು ಮೈಸೂರಿಗೆ ಹೋಗುವುದಕ್ಕಿಂತ ಮುಂಚಿತವಾಗಿ ಕೆಲವರು ಬಂದು ರೆಪ್ರೆಸೆಂಟೇಶನ್ಸ್ ಕೂಡ ಕೊಟ್ಟಿದ್ದಾರೆ. ಈಗ ಆಫೀಸ್‌ಗಳಿಗೆ ಹೋಗಬೇಕಾದರೆ ಬೆಳಿಗ್ಗೆ 6 ಗಂಟೆಯಿಂದ 9 ಗಂಟೆ, 9-30 ಗಂಟೆವರೆಗೂ ವಿದ್ಯುಚ್ಛಕ್ತಿ ಇಲ್ಲವೆಂದರೆ ಅವರು ಅಡುಗೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ಅವರು ರೆಡಿಯಾಗಿ ಹೋಗುವುದು ಹೇಗೆ ? ಅಥವಾ ಸ್ಕೂಲ್‌ಗೆ ಹೋಗುವ ಮಕ್ಕಳಿಗೆ ಒಂದು ಟಿಫಿನ್ ಕ್ಯಾರಿಯರ್‌ನಲ್ಲಿಸ್ವಲ್ಪ ಟಿಫಿನ್ ಇಟ್ಟು ಕೊಡುವುದಕ್ಕಾಗುವುದಿಲ್ಲ ಎಂದು ಅವರು ಹೇಳುವುದರಲ್ಲಿ ಅರ್ಥ ಇದೆ. ಅದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ಟೈಮಿಂಗ್ಸ್ ಚೇಂಜ್ ಮಾಡತಕ್ಕಂಥ ವಿಚಾರ ಪಟ್ಟಣ ಪ್ರದೇಶಗಳದ್ದಾದರೆ, ಅದೇ ರೀತಿ ರೈತರ ಪಂಪ್‌ಸೆಟ್‌ಗಳಿಗೂ ಕೂಡ ಎಷ್ಟು ಗಂಟೆಗಳ ಕಾಲ ವಿದ್ಯುಚ್ಛಕ್ತಿ ಕೊಡಬೇಕು, ವಿದ್ಯುಚ್ಛಕ್ತಿಲಭ್ಯತೆ ಎಷ್ಟು ಇತ್ಯಾದಿಯನ್ನು ಕೂಡ ನಾವು ಗಮನದಲ್ಲಿ ಇಟ್ಟುಕೊಳ್ಳಬೇಕು. ಅನಂತರ ಹೈ ಟೆನ್‌ಷನ್ ಯೂಜರ್ಸ್ ಏನಿದ್ದಾರೆ. ಆ ವಿದ್ಯುಚ್ಛಕ್ತಿಯನ್ನು ಡೈವರ್ಟ್ ಮಾಡತಕ್ಕಂಥದ್ದು ಇದೆ. ಅದು ಈಗ ಎಷ್ಟು ಪರ್ಸೆಂಟ್ ಇದೆ, ಅದನ್ನು ನಾವು ಸ್ವಲ್ಪ ಅಗ್ರಿಕಲ್ಚರ್ ಸೆಕ್ಟಾರ್ ಕಡೆ ಅಂದರೆ ಪಂಪ್‌ಸೆಟ್ಸ್ ವಗೈರೆಗೆ ಡೈವರ್ಟ್ ಮಾಡುವುದಕ್ಕೆ ಆ ಕಡೆ ಹೆಚ್ಚು ತಿರುಗಿಸುವುದಕ್ಕೆ ಗಮನಕೊಡಬೇಕಾಗಿದೆ. ಅದನ್ನು ಈ ತಿಂಗಳುಗಳಲ್ಲಿಮಾಡಬೇಕಾಗಿದೆ. ತಮಗೆ ಗೊತ್ತಿದೆ. ಮುಂದೆ ಮಳೆ ಬಂದಾಗ ನಮ್ಮ ಹೈಡ್ರೋ ಎಲೆಕ್ಟ್ರಿಕ್ಸ್ ಪ್ರಾಜೆಕ್ಟ್‌ಗಳಲ್ಲಿ ನೀರು ಹೆಚ್ಚು ಚುಂಬಿದರೆ ಅಷ್ಟು ತೊಂದರೆ ಬರುವುದಿಲ್ಲ. ಅಲ್ಲಿಯವರೆಗೆ ನಾವು ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಈ ಸೆಕ್ಟಾರ್‌ಗೆ ಕೊಡಬೇಕಾಗುತ್ತದೆ. ನಾವು ಕಟ್ ಅಪ್ಲೈ ಮಾಡಿ ಹೈಟೆನ್‌ಷನ್ ಯೂಜರ್ಸ್ ಕಡೆಯಿಂದ ಈ ಕಡೆ ತಿರುಗಿಸುವ ಸಂದರ್ಭ ಇದೆ. ಈಗ ನಾವು ಅದನ್ನೂ ಕೂಡಗಮನದಲ್ಲಿ ಇಟ್ಟುಕೊಳ್ಳಬೇಕು. ನಾವು ಇದನ್ನು ತಡ ಮಾಡುವ ಹಾಗೆ ಇಲ್ಲ. ಏಕೆಂದರೆ ಈ ಸೀಜನ್‌ನಲ್ಲಿ ಇದು ಹೆಚ್ಚಾಗಿ ಬರತಕ್ಕಂಥಾದ್ದು. ಆಮೇಲೆ ಪಂಪ್ ಸೆಟ್ಟನ್ನು ನಂಬಿಕೊಂಡು ಯಾವ ಸೆಕೆಂಡ್ ಬೆಳೆಯನ್ನು ತೆಗೆಯಬೇಕೆಂದು ಮಾಡಿರುತ್ತಾರೆ. ಆ ಬೆಳೆ ಪೆಟ್ಟಾಗುವುದಕ್ಕೆ ಅದು ಕಾರಣವಾಗುತ್ತದೆ. ಅದು ಅಲ್ಲದೆ ವೋಟಾರ್ಸ್ ಸುಟ್ಟು ಹೋಗಿರತಕ್ಕಂಥಾದ್ದು ವೋಲ್ಟೇಜ್ ಡ್ರಾಪ್ ಆಗುವುದರಿಂದ ಅದು ನಿಜ ಪಂಪ್‌ಸೆಟ್ಸ್ ಓನರ್ಸ್ ಯಾರು ಇರುತ್ತಾರೆ ಅವರ ಅನುಭವ. ಎಲ್ಲ ಕಡೆ ಈ ರೀತಿ ಆಗದಿದ್ದರೂ ಕೂಡ ಅನೇಕ ಕಡೆಗಳಲ್ಲಿ ಎರಡು ರೀತಿ ಆಗುತ್ತಿದೆ. ಲೋಡ್ ಜಾಸ್ತಿಯಾಗತಕ್ಕಂಥಾದ್ದು ಒಂದು ಟ್ರಾನ್ಸ್‌ಫಾರ್ಮರ್ ಏನಿದೆ ಅವುಗಳ ಕ್ವಾಲಿಟಿ ಸರಿಯಾಗಿಲ್ಲ ಎನ್ನುವುದು ಒಂದು. ಇನ್ನೊಂದು ಲೋಡ್ ಜಾಸ್ತಿಯಾಗುತ್ತದೆ,. ಲೋಡ್ ಜಾಸ್ತಿಯಾದಾಗ ಲೋಡ್ ಜಾಸ್ತಿ ತೆಗೆದುಕೊಳ್ಳುವ ಟ್ರಾನ್ಸ್‌ಫಾರ್ಮರ್ ಬೇಕು, ಆ ಡಬ್ಬಗಳು ಇತ್ಯಾದಿ ಬೇಕು ಎಂದು ಹೇಳಿದ್ದಾರೆ. ನಾವು ಎನ್.ಜಿ.ಇ.ಎಫ್.ಗೆ ಕೂಡ ಆದಷ್ಟು ಟೈಮ್ ಪ್ರಕಾರ ಇವನ್ನೆಲ್ಲ ಸಪ್ಲೈ ಮಾಡಿ ಎಂದು ಹೇಳಿದ್ದೇವೆ. ಮಾನ್ಯ ಅಧ್ಯಕ್ಷರೇ ಇದೆಲ್ಲಾ ತಮ್ಮ ಗಮನದಲ್ಲಿದೆ ನಾವು ಹಿಂದಿನಕ್ಕಿಂತ ಹೆಚ್ಚು ಹಣವನ್ನು ಕೆ.ಇ.ಬಿ.ಗೆ ತುಂಬುತ್ತಿದ್ದೇವೆ. ಈಗಲೂ ಕೂಡ ಒಂದು ದೊಡ್ಡ ಮಾಸ್ಟರ್ ಪ್ಲಾನ್ ನಮೂನೆ ಇದೆ. ಮಾಸ್ಟರ್ ಪ್ಲಾನ್ ಸಿದ್ಧ ಮಾಡದಿದ್ದರೂ ವರ್ಲ್ಡ್ ಬ್ಯಾಂಕ್ ಎಡ್ ಆಗಲಿ ತೆಗೆದುಕೊಳ್ಳತಕ್ಕಂಥ ಮುಂದಿನ ದೃಷ್ಟಿಯಿಂದಲಾದರೂ ನಾವು ಸಿದ್ಧತೆಮಾಡಿಕೊಳ್ಳಬೇಕಾಗುತ್ತದೆ. ನಾವು ಕೆ.ಇ.ಬಿ.ಗೆ ನೂರಾರು ಕೋಟಿರೂಪಾಯಿಗಳ ಹಣ ತುಂಬದೆ ಇದ್ದರೆ ಕೆಲಸ ಕೂಡ ಮಾಡುವುದಕ್ಕೆ ಅವರಿಗೂ ಕಷ್ಟವಾಗುತ್ತದೆ. ಅದಕ್ಕೆ ಈಗಿರತಕ್ಕ ಕೆ.ವಿ.ಲೈನ್‌ಅನ್ನು ಜಾಸ್ತಿ ಮಾಡಿಕೊಳ್ಳಬೇಕಾಗುತ್ತದೆ, ಜಾಸ್ತಿ

ಲೈನ್ ಎಳೆಯಬೇಕಾಗುತ್ತದೆ. ಅನೇಕ ಕಡೆಗಳಲ್ಲಿ ಕೆಲಸಕಾರ್ಯಗಳು ಮಾಡುತ್ತಿದ್ದಾರೆ. ಆದರೂ ಸಾಲದು. ಕೆ.ಇ.ಬಿ.ಯಲ್ಲಿ ನಾವು ಹಣಕಾಸಿನ ಶಕ್ತಿಯನ್ನು ತುಂಬದೇ ಇದ್ದರೆ ಹೆಚ್ಚು ಲೋಡನ್ನು ತೆಗೆದುಕೊಳ್ಳುವುದಕ್ಕೆ ಪವರ್ ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಯಾರಿಗೂ ಕೂಡ ಸಾಧ್ಯವಾಗುವುದಿಲ್ಲ. ಈಗ ನಾವು ಅವೈಲಬಿಲಿಟಿ ಆಫ್ ದಿ ಪವರ್ ಏನಿದೆ, ನನಗೆ ಗೊತ್ತಿರುವ ಹಾಗೆ ಡೀಸಲ್ ಪವರ್ ಸ್ಟೇಷನ್ ಯಲಹಂಕ, ಇದರದ್ದೂ ಈಗಾಗಲೇ ರೆಡಿಯಾಗಿ ನಮಗೆ ಬರುತ್ತಿದೆ. ಆಮೇಲೆ ರಾಯಚೂರು ಥರ್ಮಲ್ ಪವರ್ ಸ್ಟೇಷನ್, ಅದರದ್ದೂ ನಾವು ಹೆಚ್ಚು ಪವರ್ ತೆಗೆದುಕೊಳ್ಳತಕ್ಕಂಥಾದ್ದು ಇದೆ. ಏಕೆಂದರೆ, ಅದು ಕೋಲ್ ಬೇಸ್ಡ್ ಅದರ ಬಗ್ಗೆ ನಿನ್ನೆಇಲ್ಲದ ಮೊನ್ನೆ ಕೇಂದ್ರದ ಹಣಕಾಸಿನ ಸಚಿವರು ಬಂದಾಗಲೂ ಕೂಡ ಟ್ರಾನ್ಸ್‌ಪೋರ್ಟೇಷನ್ ಆಫ್ ಕೋಲ್ ವಿಚಾರದಲ್ಲಿ ಡ್ಯೂಟಿ ಏನು ಹಾಕುತ್ತಾರೆ ಅದರ ಬಗ್ಗೆ ಕೂಡ ನಾವು ಅವರ ಹತ್ತಿರ ಮಾತನಾಡಿದ್ದೇವೆ. ಅದನ್ನು ನಾವು ಸಿಂಪತಿಟಿಕ್ ಆಗಿ ನೋಡಿಕೊಂಡು ಕಾರ್ಯಕ್ರಮ ಹಾಕುತ್ತೇವೆಂದು ಅವರು ಹೇಳಿದ್ದಾರೆ. ಅದರಿಂದ ನಮಗೆ ಬಹಳ ಉಪಯೋಗವಾಗುತ್ತದೆ. ರೈಲ್ವೆ ಟ್ರಾನ್ಸ್‌ಪೋರ್ಟೇಷನ್ ವಿಚಾರದಲ್ಲೂ ಕೂಡ ರೈಲ್ವೇ ಮಿನಿಸ್ಟರ್ ಜಾಫರ್ ಷರೀಫ್‌ಜಿ ಅವರ ಹತ್ತಿರ ನಾವು ಮಾತುಕತೆಯನ್ನೂ ಆಡಿ ಪತ್ರವನ್ನೂ ಕೂಡ ಅವರಿಗೆ ಬರೆದಿದ್ದೇವೆ. ಮುಂದಿನ ಭವಿಷತ್ತಿನಲ್ಲೂ ಕೂಡ ನಾವು ಈಗಲೆ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ತಾತ್ಕಾಲಿಕವಾಗಿರತಕ್ಕಂಥ ವಿಚಾರದಲ್ಲಿ ಒಂದು ಕೆಲಸ ಮಾಡೋಣ, ಮಾನ್ಯ ಸದಸ್ಯರು ಹೇಳತಕ್ಕಂಥದ್ದರಲ್ಲಿ ಬಹಳ ವಿಚಾರ ಇದೆ: ಮಾನ್ಯ ಬೈರೇಗೌಡರವರು, ಮಾನ್ಯ ವಾಟಾಳ್‌ನಾಗರಾಜ್‌ರವರು, ಅನಂತರ, ಶ್ರೀಮಾನ್ ಯಡಿಯೂರಪ್ಪನವರು ಮಾನ್ಯ ಬನ್ನಿಕೋಡ್‌ರವರು ಮತ್ತೆ ಈ ಕಡೆಯೂ ಕೂಡ ಹೇಳಿದ್ದಾರೆ. ಅದು ಎಲ್ಲರ ಮನಸ್ಸಿನಲ್ಲಿ ಕೂಡ ಇರತಕ್ಕಂಥಾದ್ದು.

ಅಧ್ಯಕ್ಷರು:-ನಾರಾಯಣ್‌ರವರೂ ಕೇಳುತ್ತಿದ್ದರು. ನಾನುಅವರಿಗೆ ಅವಕಾಶಕೊಡಲಿಲ್ಲ. ಆದ್ದರಿಂದ ಅವರ ಹೆಸರನ್ನೂ ಸೇರಿಸಿ, ವೆಂಕಟಪ್ಪನವರ ಹೆಸರನ್ನೂ ಸೇರಿಸಿ.

ಶ್ರೀ ಎಸ್.ಬಂಗಾರಪ್ಪ :- ವೆಂಕಟಪ್ಪನವರು ಇರಬಹುದು, ನಾರಾಯಣ್‌ರವರು ಇರಬಹುದು. ಯಾರೇ ಇದ್ದರೂ ಕೂಡ ಅದು ಪಟ್ಟಣ ನಗರ ಪ್ರದೇಶವನ್ನು ಒಳಗೊಂಡಂತೆ ಗ್ರಾಮೀಣ ಪ್ರದೇಶದಲ್ಲಂತೂ ಅಸಾಧ್ಯವಾಗಿರತಕ್ಕಂಥ ಪರಿಸ್ಥಿತಿ. ಅದಾಗಿರತಕ್ಕಂಥಾದ್ದು ನಿಜ. ಲೋಡ್ ಜಾಸ್ತಿಯಾಗಿರತಕ್ಕಂಥ ವಿಚಾರ ಅದರಲ್ಲಿದೆ. ನಾವು ಏನು ಮಾಡುತ್ತೇವೆ ಎಂದರೆ, ನಾವು ತಮ್ಮನ್ನು ಮಾತುಕತೆಗೆ ಕರೆಯುತ್ತೇವೆ, ತಾವು ಬನ್ನಿ. ಎಲ್ಲಾ ಪಕ್ಷದವರು ಸೇರಿ ಮತ್ತು ಎಲ್ಲಾ ಗ್ರೂಪ್ ಇರತಕ್ಕಂಥವರು ದಯವಿಟ್ಟು ಬನ್ನಿ. ನನಗೆ ಇವತ್ತು ಆಗುವುದಿಲ್ಲ. ಏಕೆಂದರೆ ಬಿಲ್ಸ್ ವಗೈರೆ ಎಲ್ಲಾ ಇವೆ. ನಾವು ಕರೆಯುತ್ತೇವೆ. ತಡ ಮಾಡುವುದೂ ಬೇಡ. ಇನ್ನೂ ಒಂದೆರಡು ದಿನಗಳಲ್ಲೇ ಆ ಮೀಟಿಂಗ್‌ನ್ನು ಕರೆದು ನಮ್ಮ ಜೊತೆ ಮಾತನಾಡಬೇಕು. ಆ ಸದನದ ಮಾನ್ಯ ಸದಸ್ಯರು, ಫ್ಲೋರ್ ಲೀಡರ್ಸ್ ಮತ್ತೊಬರು, ಯಾರು ಬರುತ್ತೀರೋ, ನೀವು ಬನ್ನಿ ಅಥವಾ ನಿಮ್ಮವರನ್ನು ಯಾರನ್ನಾದರೂ ಕಳುಹಿಸಿಕೊಡಿ. ಆದರೆ ವಿಷಯ ಗೊತ್ತಿರತಕ್ಕಂಥವರು ಅಲ್ಲಿದ್ದರೆ ತಮ್ಮ ಅಭಿಪ್ರಾಯವನ್ನು ಸರ್ಕಾರ ತಿಳಿದು ಕೊಳ್ಳುವುದಕ್ಕೆ, ಕೆ.ಇ.ಬಿ.ನವರು ತಿಳಿದುಕೊಳ್ಳುವುದಕ್ಕೆ ಅವರ ಅಧಿಕಾರಿಗಳನ್ನು ಕೂಡ ಕರೆಯುತ್ತೇವೆ. ಒಂದು ಸಾರಿ ಕುಳಿತಕೊಂಡು ಎಲ್ಲಾ ಮಾತನಾಡೋಣ. ವಾಸ್ತವಾಂಶ ಏನು ಎನ್ನತಕ್ಕಂಥದ್ದನ್ನು ಯಾವುದನ್ನೂ ಕೂಡ ಮುಚ್ಚಿಡದೆ ನಿಮ್ಮೆದುರಿಗೆ ಎದುರಿಗೆ ಕುಳಿತುಕೊಂಡು ಮಾತನಾಡೋಣ. ವಾಸ್ತವಾಂಶದ ಆಧಾರದ ಮೇಲೆ ಹೋಗೋಣ. ತೀರ್ಮಾನಗಳು ಏನಾದರೂ ತಪ್ಪಿದರೆ ತತ್‌ಕ್ಷಣ ಸರಿಪಡಿಸತಕ್ಕಂಥ ಕೆಲಸವನ್ನು ಅಲ್ಲೇನೆ, ಅದೇ

ಸಭೆಯಲ್ಲಿ ನಾವು ತೆಗೆದುಕೊಳ್ಳುತ್ತೇವೆ. ಹಾಗೆ ಮಾಡೋಣ. ಅನಂತರ ಲಾಂಗ್ ರೇಂಜ್ ಪಾಲಿಸೀಸ್, ತಮಗೆ ಗೊತ್ತಿರುವ ಹಾಗೆ, ವರ್ಲ್ಡ್ ಬ್ಯಾಂಕ್ ಏಡ್ ಮತ್ತೊಂದು ಮಾಡತಕ್ಕಂಥಾದ್ದು ಏನಿದೆ ಅದಕ್ಕೆ ತತ್‌ಕ್ಷಣ ಏನು ಕಾರ್ಯಕ್ರಮ ಹಾಕಬೇಕು, ಅದನ್ನು ನಿಮ್ಮ ಕಣ್ಣೆದುರಿಗೇ ನಿಮ್ಮನ್ನೂ ಜೊತೆಗೆ ಕೂಡಿಸಿಕೊಂಡು ಮಾಡೋಣ. ತಾವು ಅಲ್ಲದೇನೇ ಈ ಕಡೆ ಇರತಕ್ಕಂಥ ಮಾನ್ಯ ಸದಸ್ಯರು ಕೂಡ ಯಾರು ಬರಬೇಕೆಂದು, ಅದನ್ನು ಕಾನ್‌ಫರೆನ್ಸ್ ಹಾಲ್‌ನಲ್ಲೇ ನಾವು ಇಟ್ಟುಕೊಳ್ಳೋಣ. ಕುಳಿತಕೊಂಡು ಎಲ್ಲಾ ಮಾತನಾಡೋಣ. ಅದರ ಬಗ್ಗೆ ಕಾರ್ಯಕ್ರಮ ಕೂಡ ಹಾಕೋಣ. ಮೋಸ್ಟಲಿ ನಾವು ಅದನ್ನು ಹಾಕಬೇಕೆಂದರೆ, ನಾಳೇನೇ ಇಟ್ಟುಕೊಳ್ಳಬೇಕಾಗುತ್ತದೆಂದು ನನ್ನ ಭಾವನೆ. ಏಕೆಂದರೆ, ನಾಳೆ ಈ ಸದನಕ್ಕೆ ಕೊನೆ ದಿವಸ ಎನ್ನತಕ್ಕಂಥ ಅಭಿಪ್ರಾಯ ಇರುವುದರಿಂದ, ತಾವೆಲ್ಲಾ ಊರಿಗೆ ಹೋಗಿಬಿಟ್ಟರೆ ಮತ್ತೆ ತೊಂದರೆಯಾಗುತ್ತದೆ. ತಾವು ಇರುವಾಗಲೇ ಕೊನೇಪಕ್ಷ, ನಾಳೆ ಒಂದು ಅಥವಾ ಒಂದೂವರೆ ಗಂಟೆ ಕುಳಿತುಕೊಂಡರೆ ಸಾಕಾಗುಬಹುದು. ಅದಕ್ಕೆ ಟೈಮ್ ಕೂಡ ಇಂಡಿಕೇಟ್ ಮಾಡಿ ತಮಗೆ ಆಮಂತ್ರಣ ಪತ್ರವನ್ನು ಕಳುಹಿಸಿಕೊಡುತ್ತೇವೆ. ದಯವಿಟ್ಟು ಬನ್ನಿ. ಅಲ್ಲಿ ಕುಳಿತುಕೊಂಡು ತೀರ್ಮಾನ ಮಾಡೋಣ. ಈಗ ಸದನದಲ್ಲಿ ಏನಾಗುತ್ತದೆ ಎಂದರೆ, ನಾವು ಚರ್ಚೆ ಮಾಡಬಹುದು. ಮಾನ್ಯ ಸಭಾಧ್ಯಕ್ಷರು ಅವಕಾಶ ಕೊಟ್ಟರೆ, ಐ ಹ್ಯಾವ್ ನೋ ಅಬ್ಜಕ್ಷನ್. ಏಕೆಂದರೆ ಲೆಟ್ ಅಲ್ ದಿ ಮ್ಯಾಟರ್ ಬಿ ಡಿಸ್ಕಸ್ಡ್. ನನಗೆ ಆ ಪ್ರಶ್ನೆ ಅಲ್ಲ. ಆದರೆ ಇಲ್ಲಿ ಬೇರೆ ವಿಷಯಗಳನ್ನು ಪ್ರಸ್ತಾಪಿಸಲು ತೊಂದರೆಯಾಗಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಸಭಾಧ್ಯಕ್ಷರೆ, ನಿಲುವಳಿ ಸೂಚನೆ ಮೂಲಕವಾಗಲೀ ಅಥವಾ ಯಾವುದಾದರೂ ನೋಟೀಸ್ ಕೊಟ್ಟು ಚರ್ಚೆ ಮಾಡಬಹುದು. ಏಕೆಂದರೆ ಸರ್ಕಾರಕ್ಕೆ ಗೊತ್ತಿದೆ. ವಿದ್ಯುತ್ ಕೊರತೆಯಿಂದ ರೈತ ಹಾಳಾಗುತ್ತಿರುವುದು ಇಡೀ ರಾಜ್ಯಕ್ಕೆ ಗೊತ್ತಿರುವುದು, ನಿಮಗೆ ಪ್ರತ್ಯಕ್ಷ ಅನುಭವ ಇರತಕ್ಕಂಥಾದ್ದು. ಇವತ್ತು ಬೇರೆ ಮೀಟಿಂಗ್ ಕರೆಯುತ್ತೇನೆಂದು ಹೇಳುತ್ತಿದ್ದೀರಿ. ನಾನು ಹೇಳುತ್ತಿರುವುದು ಏನೆಂದರೆ, ನಾವು ಈ ಸದನ ಸದಸ್ಯರಾಗಿ ಇದನ್ನು ಸರ್ಕಾರದ ಗಮನಕ್ಕೆ ತರುವಂಥ ಪ್ರಯತ್ನವನ್ನು ಕಳೆದ ಒಂದು ತಿಂಗಳಿನಿಂದ ಸತತವಾಗಿ ಮಾಡುತ್ತಿದ್ದೇವೆ. ಪತ್ರಿಕೆಗಳಲ್ಲಿ ನೋಡಿ ನಿಮ್ಮ ನಿಮ್ಮ ಅನುಭವಕ್ಕೂ ಬಂದಿದೆ. ಆದ್ದರಿಂದ ಸರ್ಕಾರಕ್ಕೆ ಇದರ ಬಗ್ಗೆ ಒಂದು ಕಮಿಟ್‌ಮೆಂಟ್ ಬೇಕಲ್ಲಾ ? ಅಧಿಕಾರಿಗಳನ್ನು ಕರೆದು ಸುಧಾರಣೆ ಮಾಡಿ. ಒಂದು ತಿಂಗಳಾಯಿತು ಸದನದ ಕಾರ್ಯಕಲಾಪ ಸೇರಿ. ಇವತ್ತು ಹಳ್ಳಿಗಳ ಕಡೆ ಹೋಗಿ ಬನ್ನಿ. ಏನೇ ತಪ್ಪಾಗಿದ್ದರೂ ಅದನ್ನು ಸರಿ ಮಾಡುತ್ತೇವೆ ಎಂದು ಹೇಳುವಂಥ ಶಕ್ತಿ ಇವತ್ತು ಸರ್ಕಾರಕ್ಕೆ ಇಲ್ಲ. ಹೊಸದಾಗಿ ವಿದ್ಯುತ್ ಉತ್ಪಾದನೆಯನ್ನು ಮಾಡುವುಕ್ಕೆ ಸಮಯ ತೆಗೆದುಕೊಳ್ಳಿ ಇವತ್ತೇ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಇರುವ ವಿದ್ಯುತ್ತನ್ನು ಸಮರ್ಪಕವಾಗಿ ವಿತರಣೆ ಮಾಡುವಂಥಾದ್ದು ಆಗಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ತಂದು ಸರಿಯಾಗಿ ಕನೆಕ್ಷನ್ ಕೊಟ್ಟು ಹಳೆಯ ವೈರ್‌ಗಳನ್ನು ತೆಗೆದು ಬೇರೆ ವೈರ್‌ಗಳನ್ನು ಹಾಕಿ ಕೊಡುವ 7-8 ಗಂಟೆಗಳಾದರೂ ವಿದ್ಯುಚ್ಛಕ್ತಿಯನ್ನು ಸಮರ್ಪಕವಾಗಿ ಸರಬರಾಜು ಮಾಡುವ ಬಗ್ಗೆ ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡದೆ ಇರುವ ಸಂದರ್ಭದಲ್ಲಿ ನಾಳೆ ನಾವು ಕ್ಷೇತ್ರಕ್ಕೆ ವಾಪಸ್ ಹೋದಾಗ ಜನತೆಗೆ ಮುಖ ತೋರಿಸುವುದು ಹೇಗೆ? ಯಾವುದೇ ಇರಬಹುದು. ಇದು ಇಡೀ ರಾಜ್ಯದಲ್ಲಿರುವ ಸಮಸ್ಯೆ. ಸರ್ಕಾರ ಇದರ ಬಗ್ಗೆ ನಿರ್ದಿಷ್ಟವಾಗಿ ಹೇಳುತ್ತೀರಾ ?

ಅಧ್ಯಕ್ಷರು :-ಈಗ ನೀವು ಹೇಳಿದ ಅಭಿಪ್ರಾಯಗಳಿಗೂ, ಮುಖ್ಯ ಮಂತ್ರಿಗಳು

ವ್ಯಕ್ತಪಡಿಸಿದ ಅಭಿಪ್ರಾಯಗಳಿಗೂ ಏನೂ ವ್ಯತ್ಯಾಸ ಇಲ್ಲವಲ್ಲ ?

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಾನು ಹೇಳಿದರಲ್ಲೂ, ಸನ್ಮಾನ್ಯ ಮುಖ್ಯ ಮಂತ್ರಿಗಳು ವ್ಯಕ್ತಪಡಿಸಿರುವ ಅಭಿಪ್ರಾಯದಲ್ಲೂ ವ್ಯತ್ಯಾಸ ಇಲ್ಲದೇ ಇರಬಹುದು. ಇದು ವಾಸ್ತವಿಕ ಅಂಶ.

ಅಧ್ಯಕ್ಷರು : ಹೌದು.

ಶ್ರೀ ಬಿ.ಎಸ್.ಯಡಿಯೂರಪ್ಪ:-ಇದನ್ನು ಸುಧಾರಣೆ ಮಾಡುವುದಕ್ಕೆ ಸರ್ಕಾರ ಏನುಕ್ರಮ ತೆಗೆದುಕೊಂಡಿದೆ?

ಅಧ್ಯಕ್ಷರು : ನಾಳೆ ಮೀಟಿಂಗ್ ಕರೆಯುತ್ತೇನೆ, ನೀವೂ ಬನ್ನಿ, ಅಧಿಕಾರಿಗಳನ್ನೂ ಕರೆಯುತ್ತೇನೆ. ಎಲ್ಲರೂ ಒಟ್ಟಿಗೆ ಕುಳಿತು ಚರ್ಚೆ ಮಾಡೋಣ ಎಂದು ಹೇಳಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಜನ ಆಯ್ಕೆಮಾಡಿ ಕಳುಹಿಸಿರುವಂಥ ಈ ಸದನದ ಮೂಲಕ ಚರ್ಚೆಯಾಗಿ ಸಮರ್ಪಕವಾದ ಉತ್ತರ ಸಿಗಬೇಕು. ಇದುವರೆಗೆ ಏನಾಗುತ್ತಿತ್ತು ಎಂದರೆ, ಪ್ರಮುಖವಾದಂಥ ಸಮಸ್ಯೆಗಳು ಬಂದಾಗ ಚೇಂಬರಿಗೆ ಹೋಗಿ ಮಾತನಾಡೋಣ ಎನ್ನುವ ಪದ್ಧತಿ ಏನಿತ್ತು ಅದು ಸರಿಯಲ್ಲ. ಇಲ್ಲೇ ಚರ್ಚೆಯಾಗಬೇಕು. ಅದಕ್ಕೆ ಪರಿಹಾರದೊರಕಿಸಿಕೊಡಬೇಕು. ಆಗ ಮಾತ್ರ ಸಮಾಧಾನವಾಗುತ್ತದೆ.

ಶ್ರೀ ಎಸ್.ಬಂಗಾರಪ್ಪ :-ನಾನೇನೂ ಅವರನ್ನು ಚೇಂಬರ್‌ಗೆ ಬನ್ನಿ ಎಂದು ಕರೆಯಲಿಲ್ಲ. ನಾನು ಎಲ್ಲರನ್ನೂ ಕಾನ್‌ಫರೆನ್ಸ್ ಹಾಲ್‌ಗೆ ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಈಮಾತನ್ನು ಒಂದು ವರ್ಷದಿಂದ ಹೇಳುತ್ತಾ ಇದ್ದಾರೆ. ನಾವು ಅವರು ಎಲ್ಲಿಗೆ ಕರೆದರೂ ಹೋಗುವುದಕ್ಕೆ ತಯಾರಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:-ಮಾನ್ಯ ಅಧ್ಯಕ್ಷರೇ, ನಾವು ಸದನದ ಕಾರ್ಯಕಲಾಪಕ್ಕೆ ಬಹಿಷ್ಕಾರ ಹಾಕಿ ಹೊರಗಡೆ ಇದ್ದೆವು. ಇವೊತ್ತು ಜನರು ಹಲವಾರು ಸಮಸ್ಯೆಗಳಿಂದಾಗಿ ತೊಂದರೆಗೀಡಾಗಿದ್ದಾರೆ. ರೈತರುಗಳು ಸಾಯುತ್ತಾ ಇದ್ದಾರೆ. ಈ ಸರಕಾರಕ್ಕೆ ರೈತರ ಬಗ್ಗೆ ಕಳಕಳಿ ಇಲ್ಲ, ವಿದ್ಯುತ್ ವ್ಯವಸ್ಥೆ ಮಾಡುವ ಬಗ್ಗೆ ಕಳಕಳಿ ಇಲ್ಲ. ಜವಾಬ್ದಾರಿಯುತವಾದ ನೀತಿಯನ್ನು ಅನುಸರಿಸುತ್ತಿದೆ. ಈ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗ ಬೇಕಾಗುತ್ತದೆ.

. . .

(ಗೊಂದಲ)

ಅಧ್ಯಕ್ಷರು :- ನಾಳೆ ಕಾನ್‌ಫರೆನ್ಸ್ ಹಾಲ್‌ಗೆ ಹೋಗಿ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಮಾಡುವ ಬಗ್ಗೆ ಸಲಹೆ ಕೊಡಿ.

ಶ್ರೀ ಎಸ್.ಬಂಗಾರಪ್ಪ :-ಮಾನ್ಯ ಸದಸ್ಯರಿಗೆ ಆ ಬಗ್ಗೆ ಇಚ್ಛೆ ಇಲ್ಲದಿದ್ದರೆ ನಾನು ಕರೆಯಲು ಹೋಗುವುದಿಲ್ಲ. ವಿಷಯಗಳನ್ನು ಇಲ್ಲಿ ಹೇಳಿದ್ದಾರೆ.

Mr. SPEAKER :- No. There are others who are very serious about it. They have given a commitment. You please go through them.

ಶ್ರೀ ಎಸ್.ಬಂಗಾರಪ್ಪ:- ಅದಕ್ಕೆ Keeping in view, the sentiments, opinions expressed by all the respective members. I just gave

this suggestion.

Mr. SPEAKER:- Right. It has been accepted by the House.

ಶ್ರೀ ಎಸ್.ಬಂಗಾರಪ್ಪ:-ನಾಳೆ ಅವರು ಬರುವುದಕ್ಕೆ ರೆಡಿ ಆಗಿದ್ದರೆ ನಾಳೆ ಸಭೆಯನ್ನು ಕರೆಯಲು ನಾನು ತಯಾರಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:-ನಾವು ಸಭೆಗೆ ಬರುವುದಿಲ್ಲ ಎಂದು ಹೇಳುವುದಿಲ್ಲ.

ಶ್ರೀ ಸಿ.ಬೈರೇಗೌಡ:- ನಾವುಸಭೆಗೆ ಬರುವುದಕ್ಕೆ ಸಿದ್ಧರಿದ್ದೇವೆ. ಈಗಲೇ ಕರೆದರೂ ನಾವು ಬರುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಎಸ್.ಬಂಗಾರಪ್ಪ:-ನಾನು ಏತಕ್ಕಾಗಿ ಆ ಸಭೆಯನ್ನು ಕರೆದಿದ್ದೇನೆ ಅಂದರೆ, ತಾವು ಇಲ್ಲಿ ಚರ್ಚೆ ಮಾಡುತ್ತೀರಿ, ಆದಕ್ಕೆ ನಾವು ಸ್ಟೇಟ್‌ಮೆಂಟ್ ಕೊಟ್ಟುಬಿಡುತ್ತೇವೆ. ಆದರೂ ಕೆಲವು ಅನುಮಾನಗಳು ನಮ್ಮ ಮನಸ್ಸಿನಲ್ಲಿ ಉಳಿದುಬಿಡುತ್ತವೆ. ಯಾವುದೇ ವಿಚಾರವು ಸದನದಲ್ಲಿ ಚರ್ಚೆಯಾಗಬಾರದು ಎಂಬುದು ನನ್ನ ಅಭಿಪ್ರಾಯ ಅಲ್ಲವೇ ಅಲ್ಲ. ಚರ್ಚೆ ಮಾಡಲು ಮಾನ್ಯ ಅಧ್ಯಕ್ಷರು ಸಮಯಾವಕಾಶ ಮಾಡಿಕೊಡಲಿ. We are prepared to make a statement. Still we are left with some doubts. ಆಮೇಲೆ ಏನಾಗುತ್ತದೆಯೆಂದರೆ, ಸದನವು ನಾಳೆ ಮುಂದುವರೆಯುತ್ತದೆ, ನೀವು ಆ ಕಡೆಗೆ ಹೋಗುತ್ತೀರಿ, ನಾವು ಆ ಕಡೆಗೆ ಹೋಗುತ್ತೇವೆ. ಆದ್ದರಿಂದ ಸಭೆ ಮಾಡಿ ಅಧಿಕಾರಿಗಳನ್ನು ಕೂಡ ನಿಮ್ಮ ಎದುರು ಕೂರಿಸಿಕೊಂಡು ಚರ್ಚೆ ಮಾಡಿ ತೀರ್ಮಾನ ಮಾಡತಕ್ಕಂಥ ಕೆಲವು ವಿಚಾರಗಳು ಇವೆಯೆಂದು ನಾನು ಪ್ರಾಕ್ಟಿಕಲ್ಲಾಗಿ ಯೋಚನೆ ಮಾಡಿದೆ. I am not barring. I am not trying to put any impediments in any discussion if it is allowed by the Chair.

Mr. SPEAKER :- That is a very constructive suggestion you have made and the House should welcome it.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಅಧ್ಯಕ್ಷರೆ, ತಾವುಗಳು ಒಪ್ಪುವ ಹಾಗೆ ಇದ್ದರೆ.ನಾವು ಆ ರೀತಿಯಾಗಿ ಮಾಡೋಣ. ನಾಳೆ ತಮಗೆಲ್ಲರಿಗೂ ನಾನು ಕರೆಯುತ್ತೇನೆ. ಇಲ್ಲಿ ಆ ಕಡೆಯವರು, ಈ ಕಡೆಯವರು ಎನ್ನುವ ಪ್ರಶ್ನೆ ಇಲ್ಲ, ಎಲ್ಲಾ ಕಡೆಯವರಿಗೂ ತೊಂದರೆ ಇದೆ. ಮೇಲ್ಮನೆಯ ಮಾನ್ಯ ಸದಸ್ಯರುಗಳನ್ನು ಕೂಡ ಸಭೆಗೆ ಕರೆಯುತ್ತೇವೆ. ತಾವುಗಳು ಬಂದು ಚರ್ಚೆ ಮಾಡಿ, ಅಧಿಕಾರಿಗಳನ್ನೂ ಕೂರಿಸಿಕೊಂಡು ತಮ್ಮ ಅಭಿಪ್ರಾಯಗಳನ್ನು ತೆಗೆದುಕೊಳ್ಳೋಣ. ಹೆಚ್.ಟಿ. ಯೂಸರ್ಸ್‌ಗೆ ಕಟ್ ಅಪ್ಲೈ ಮಾಡಬೇಕೆಂದು ಇಟ್ಟುಕೊಳ್ಳೋಣ ಅದು ಹೇಗೆ, ಎಲ್ಲಿಯ ತನಕ, ಎಷ್ಟು ಎಂಬುದನ್ನು ಚರ್ಚೆ ಮಾಡಲು ಅನುಕೂಲವಾಗುತ್ತದೆ. ಹಾಗೆಯೇ ಟೈಮಿಂಗ್ಸ್‌ನ ವಿಚಾರವೂ ಕೂಡ ಬಹಳ ಉಪಯೋಗವಿದೆ. ಇದರಿಂದ ಬಹಳ ಜನರಿಗೆ ತೊಂದರೆಯಾಗಿದೆ ಎನ್ನುವ ಅಭಿಪ್ರಾಯ ಎಲ್ಲರಿಂದಲೂ ಬಂದಿದೆ. ಪಂಪ್‌ಸೆಟ್‌ಗಳಿಗೆ ಬರೀ ನೈಟ್ ಟೈಮ್ ಪವರ್ ಕೊಟ್ಟರೆ ಚೆನ್ನಾಗಿರುತ್ತದೆ. ಏಕೆಂದರೆ ಆಗ ಲೋಡ್ ಸ್ವಲ್ಪ ಕಡಿಮೆಯಾಗುತ್ತದೆ. ಬೇರೆ ಎಲ್ಲ ಕಡೆ ಸ್ಯಾಪಾಗಿರುತ್ತದೆ ಎಂಬ ಅಭಿಪ್ರಾಯ ಇದೆ. These are all the matters. ಈಗ ಇಲ್ಲಿ ಎಷ್ಟೇ ಚರ್ಚೆ ಮಾಡಿದರೂ ತಕ್ಷಣ ಅದು ಮುಗಿಯುವುದಕ್ಕೆ ಬರಲಾರದೆಂಬ ದೃಷ್ಟಿಯಿಂದ ನಾನು ಹೇಳಿದೆ. ಆದ್ದರಿಂದ ನಾಳೆ ಬರುವುದಕ್ಕೆ ತಾವು ಒಪ್ಪಿಕೊಂಡರೆ ನಾಳೆಗೆ ನಾನು ಸಭೆಗೆ ಏರ್ಪಾಡು ಮಾಡಿಸುತ್ತೇನೆ.

ಅಧ್ಯಕ್ಷರು:- ಒಪ್ಪಿಗೆ ಆಯಿತು. ಈಗ ಸಭೆಯ ಮುಂದಿಡಲಾಗುವ ಕಾಗದಪತ್ರಗಳು.

ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪಟ್ಟಿ

1. ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಮಂತ್ರಿ) :-ಮಾನ್ಯ ಅಧ್ಯಕ್ಷರೆ, 1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ.

ಅ ಅಧಿಸೂಚನೆ ಸಂಖ್ಯೆ : ಹೆಚ್‌ಡಿ 256 ಸಿಎನ್‌ಎ 88 ದಿನಾಂಕ 20ನೇ ಮಾರ್ಚ್ 1992 ಮಂಡ್ಯ ಜಿಲ್ಲೆಯ ಮೆಲ್ಲಹಳ್ಳಿಯಲ್ಲಿ ಖಾಯಂ ಚಿತ್ರಮಂದಿರದ ಕಟ್ಟಡವನ್ನು ಪೂರ್ಣಗೊಳಿಸಲು ನೀಡಲಾದ ನಿರಾಕ್ಷೇಪಣಾ ಪತ್ರದ ಅವಧಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸುವ ಬಗ್ಗೆ.

ಆ ಅಧಿಸೂಚನೆ ಸಂಖ್ಯೆ :ಹೆಚ್‌ಡಿ 3 ಸಿಎನ್‌ಎ 92 ದಿನಾಂಕ 26ನೇ ಮಾರ್ಚ್1992 ಶಿಡ್ಲಘಟ್ಟ ತಾಲ್ಲೂಕು, ಜಂಗಮಕೋಟೆ ಹೋಬಳಿಯ ಕುರುಬರಹಳ್ಳಿ ಗ್ರಾಮದಲ್ಲಿ ಶ್ರೀ ನಾಗರಾಜಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಲು ದಿನಾಂಕ28-12-1991ರವರೆಗೆ ಆಗಿರುವ ವಿಳಂಬವನ್ನು ಮನ್ನಾ ಮಾಡುವ ಬಗ್ಗೆ.

ಇ ಅಧಿಸೂಚನೆ ಸಂಖ್ಯೆ : ಹೆಚ್‌ಡಿ 205 ಸಿಎನ್‌ಎ 91 ದಿನಾಂಕ 24ನೇ ಮಾರ್ಚ್ 1992 ಮರಾಠಾ ಲೈಟ್ ಇನ್‌ಫ್ಯಾಂಟ್ರಿ ರೆಜಿಮೆಂಟ್ ಕೇಂದ್ರ, ಬೆಳಗಾಂ, ಇವರು ತಮ್ಮ ಆಡಿಟೋರಿಯಂನಲ್ಲಿ 35 ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಬಗ್ಗೆ, ಹಾಗೂ

ಈ ಅಧಿಸೂಚನೆ ಸಂಖ್ಯೆ : ಹೆಚ್ ಡಿ 30 ಸಿಎನ್‌ಎ 92 ದಿನಾಂಕ 25ನೇ ಮಾರ್ಚ್ 1992 ಉತ್ತರ ಕನ್ನಡ ಜಿಲ್ಲೆಯ ಬಣಗಾದಲ್ಲಿರುವ ಬಳ್ಳಾಪುರ ಉದ್ದಿಮೆಯವರು ತಮ್ಮ ಸಭಾಂಗಣದಲ್ಲಿ 35 ಎಂ.ಎಂ. ಫಿಲಂ ಪ್ರದರ್ಶಿಸಲು ವಿನಾಯಿತಿ ನೀಡುವ ಬಗೆಗಿನ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

2. ಶ್ರೀ ಬ್ಲೇಸಿಯಸ್.ಎಂ.ಡಿಸೌಜ : (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಯವರ ಪರವಾಗಿ1956ನೇ ಸಾಲಿನ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ, 1990-91ನೇ ಸಾಲಿನ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್‌ನ ಲಿಮಿಟೆಡ್ 10ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

3. ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿ) ಮಾನ್ಯ ಅಧ್ಯಕ್ಷರೆ, 1980ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಬಿವೃದ್ಧಿ ಅಧಿನಿಯಮದ 25ನೇ ಕಲಮಿನ ಮೇರೆಗೆ, 1990-91ನೇ ಸಾಲಿನ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ, ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮರಾಯನಗುಡಿ ಆಯಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

4. ಶ್ರೀ ಕೆ.ಜೆ.ಜಾರ್ಜ್ : (ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮಂತ್ರಿಯವರ ಪರವಾಗಿ 974ನೇ ಸಾಲಿನ ಜಲ (ಮಾಲಿನ್ಯ ಮತ್ತು ನಿಯಂತ್ರಣ) ಕಾಯ್ದೆಯ 39 (2)ನೇ ಕಲಮಿನ ಮೇರೆಗೆ, 1990-